# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 209 | Pages. 2 | Date: 29-07-2026, WEDNESDAY | RNI NO: KARKAN/2024/89601 | Kannada Daily

ಸಂಪುಟ : 02 - ಸಂಚಿಕೆ : 209 - ಪುಟಗಳು : 2 29-07-2026 ಬುಧವಾರ | Ph: 8762954248 | ದರ : ₹1


## ನಾಳೆ ಚೆನ್ನಮ್ಮನವರ ಉತ್ತರ ಕ್ರಿಯಾದಿ ಕಾರ್ಯ

### ಅಂತಿಮ ಸಿದ್ಧತೆ ಪರಿಶೀಲಿಸಿದ ಹೆಚ್.ಡಿ.ಕೆ.| ಲಕ್ಷಾಂತರ ಜನ ಭಾಗವಹಿಸುವ ನಿರೀಕ್ಷೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರ ಧರ್ಮಪತ್ನಿ ಚೆನ್ನಮ್ಮ ಅವರ ಉತ್ತರ ಕ್ರಿಯಾದಿ ಕಾರ್ಯ ಜು.30 ರಂದು ಗುರುವಾರ ನಡೆಯಲಿದೆ.

ಇದಕ್ಕಾಗಿ ಪೂರ್ವ ಸಿದ್ಧತೆ ಕಾರ್ಯಗಳು ಭರದಿಂದ ಸಾಗಿದ್ದು ಬಹುತೇಕ ಮುಗಿಯುವ ಹಂತಕ್ಕೆ ಬಂದಿವೆ. ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರು, ಮಾಜಿ ಸಚಿವ ಹೆಚ್.ಡಿ.ರೇವಣ್ಣ ಹಾಗೂ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಹಲವು ಬಾರಿ ಭೇಟಿ ನೀಡಿ ಸಿದ್ಧತಾ ಕಾರ್ಯ ಮೇಲ್ವಿಚಾರಣೆ ನಡೆಸಿದ್ದಾರೆ.

ಮಂಗಳವಾರ ಸಹ ಹೆಚ್.ಡಿ.ಕೆ.ಆಗಮಿಸಿ ಆಗಿರುವ ಕೆಲಸ ಕಾರ್ಯಗಳ ಅವಲೋಕನ ನಡೆಸಿದರು.

ಅವರೊಂದಿಗೆ ಹಾಸನ ಶಾಸಕ ಹೆಚ್.ಪಿ.ಸ್ವರೂಪ್, ವಿಧಾನ ಪರಿಷತ್ ಸದಸ್ಯ ಎಸ್.ಎಲ್.ಭೋಜೇಗೌಡ ಮೊದಲಾದವರಿದ್ದರು.

ಚೆನ್ನಮ್ಮ ಅವರ 11 ದಿನದ ಕಾರ್ಯಕ್ಕೆ ಲಕ್ಷಕ್ಕೂ ಅಧಿಕ ಮಂದಿ ಆಗಲಿಸುವ ನಿರೀಕ್ಷೆ ಇದ್ದು, ಪಾರ್ಕಿಂಗ್ ವ್ಯವಸ್ಥೆ, ಊಟಕ್ಕಾಗಿ ಪ್ರತ್ಯೇಕ ಆಸನ ಮತ್ತು ಕೌಂಟರ್ ತೆರೆಯಲಾಗಿದೆ.

ಊಟ ಸಿದ್ಧಮಾಡುವ ಜವಾಬ್ದಾರಿಯನ್ನು



ಮೈಯ್ಯಾಸ್ ಗ್ರೂಪ್ ನವರಿಗೆ ವಹಿಸಲಾಗಿದೆ. ಸುಮಾರು ಆರು ವಿಧದ ಸಿಹಿ ತಿಂಡಿ ಸೇರಿ ರುಚಿಕರವಾದ ಅಡುಗೆ ತಯಾರಾಗುತ್ತಿದೆ. ಸಾಮಾನ್ಯರು, ಗಣ್ಯರು ಸೇರಿದಂತೆ ಪ್ರತ್ಯೇಕವಾಗಿ 16 ಕೌಂಟರ್ ತೆರಯಲಾಗಿದ್ದು, ಒಂದೂವರೆ ಸಾವಿರ ಅಡುಗೆ ಭಟ್ಟರು ತರೇಹೇವಾರಿ ಅಡುಗೆ ತಯಾರು ಮಾಡಲಿದ್ದಾರೆ.

ಕಾರ್ಯ ನಡೆಯುವ ಒಂದು ಕಿಮೀ ದೂರದಿಂದಲೇ ವಾಹನ ನಿಲುಗಡೆಗೆ ವ್ಯವಸ್ಥೆ ಮಾಡಲಾಗಿದೆ.

ವಿಐಪಿ ಮಾರ್ಗ ಮತ್ತು, ಪಾರ್ಕಿಂಗ್ ಸ್ಥಳ, ಸಾರ್ವಜನಿಕ ಮಾರ್ಗ, ಊಟದ ಸ್ಥಳಕ್ಕೆ ದಾರಿ, ಕಡ್ಡಾಯವಾಗಿ ಎಡಕ್ಕೆ ಪಾರ್ಕಿಂಗ್, ಮಹಿಳೆಯರ ಊಟದ ಸ್ಥಕ್ಕೆದಾರಿ, ಬೈಕ್ ಹಾಗೂ ಕಾರು ನಿಲುಗಡೆಗೆ ಪ್ರತ್ಯೇಕ ಮಾರ್ಗ ವಿಐಪಿ, ಮಹಿಳೆಯರು ಹಾಗೂ ಸಾರ್ವಜನಿಕರ ಊಟಕ್ಕೆ ಪ್ರತ್ಯೇಕ ಸ್ಥಳ ನಿಗದಿ ಮಾಡಲಾಗಿದೆ.

ಪಾರ್ಕಿಂಗ್‌ಗಾಗಿ ಹಾಸನ ಕಡೆಯಿಂದ ಹೋಗುವವರಿಗೆ ಹೆದ್ದಾರಿ ಎದುರು, ಎಡಭಾಗ, ಹರಿಹರ ಪುರ ಕಡೆಯಿಂದ ಬರುವವರಿಗೆ ಮೊರಾರ್ಜಿ ವಸತಿ ಶಾಲೆ ಸುತ್ತಮುತ್ತ, ನೀರಿನ ಟ್ಯಾಂಕ್ ಪಕ್ಕ, ಹೆಲಿಪ್ಯಾಡ್ ಕೆಳಗೆ,ಹರದನಹಳ್ಳಿ ಸರ್ಕಾರಿ ಸಂಯುಕ್ತ ಶಾಲೆ ಮೊದಲಾದ ಹತ್ತಕ್ಕೂ ಕಡೆಗಳಲ್ಲಿ ಪಾರ್ಕಿಂಗ್ ಸ್ಥಳ ಗೊತ್ತು ಮಾಡಲಾಗಿದೆ.

ಕಾರ್ಯ ಕ್ರಮ ಸ್ಥಳದ ಒಂದು ಕಿಮೀ ಸುತ್ತಳತೆಯಲ್ಲಿ ದೇವೇಗೌಡರ ಕುಟುಂಬದವರ ವಾಹನ ಹೊರತು ಪಡಿಸಿ ಯಾವುದೇ ಖಾಸಗಿ

> ತಾಯಿಯವರ ಅಂತ್ಯಕ್ರಿಯೆ ನೆರವೇರಿದಂತೆಯೇ ಉತ್ತರ ಕ್ರಿಯಾದಿ ಕಾರ್ಯವೂ ಅಚ್ಚುಕಟ್ಟಾಗಿ ನಡೆಯ ಬೇಕೆಂದು ಎಲ ರೀತಿಯ ಎಚ್ಚರಿಕೆ ವಹಿಸಲಾಗಿದೆ. ಎಷ್ಟೇ ಜನರ ಬಂದರೂ ಅನ್ನ ಸಂತರ್ಪಣೆಗೆ ವ್ಯವಸ್ಥೆ ಮಾಡಲಾಗಿದೆ. ಅವರ ಅಭಿಮಾನಿಗಳು, ಜಿಲ್ಲೆಯ ಹಾಗೂ ಹೊರಗಿನ ಜನರು ಶಾಂತ ರೀತಿಯಲ್ಲಿ ಸಹಕರಿಸುವ ಮೂಲಕ ಅಮ್ಮನವರ ಆತ್ಮಕ್ಕೆ ಶಾಂತಿ ಕೋರಬೇಕೆಂದು ಮನವಿ ಮಾಡುತ್ತೇನೆ.
>
> **- ಹೆಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ**

ವಾಹನ ಒಳ ಬರುವಂತಿಲ್ಲ. ಜನರನ್ನು ಪಿಕ್ ಅಪ್ ಮತ್ತು ಡ್ರಾಪ್ ಮಾಡಲು ಸುಮಾರು 16 ವಾಹನ ವ್ಯವಸ್ಥೆ ಮಾಡಲಾಗಿದೆ.

ಭದ್ರತೆಗಾಗಿ ಅಧಿಕಾರಿಗಳು ಸಿಬ್ಬಂದಿ ಸೇರಿ 750 ಕ್ಕೂ ಹೆಚ್ಚು ಮಂದಿಯನ್ನು ಭದ್ರತೆಗಾಗಿ ನಿಯೋಜನೆ ಮಾಡಲಾಗಿದೆ.

ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರು ಸ್ಥಳದಲ್ಲೇ ಮೊಕ್ಕಾಂ ಹೂಡಿ ಊಟದ ಹಾಲ್, ಯಾವ ರೀತಿಯ ಎಂಬಿತ್ಯಾದಿ ವ್ಯವಸ್ಥೆಗಳ ಬಗ್ಗೆ ತಾವೇ ಖುದ್ದು ನಿಂತು ಎಲ್ಲಾ ಅಚ್ಚುಕಟ್ಟು ಕೆಲಸ ಮಾಡಿಸುತ್ತಿದ್ದಾರೆ.

## ಸಕಲೇಶಪುರದಲ್ಲಿ ನಾಳೆ ಆರೋಗ್ಯ ತಪಾಸಣಾ ಶಿಬಿರ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಪಟ್ಟಣದ ಶ್ರೀನಿವಾಸ ಕಲ್ಯಾಣ ಮಂಟಪದಲ್ಲಿ ಜು. 30ರ ಗುರುವಾರ ಆರೋಗ್ಯ ಉಚಿತ ತಪಾಸಣಾ ಶಿಬಿರವನ್ನು ಆಯೋಜಿಸಲಾಗಿದ್ದು, ಸಾರ್ವಜನಿಕರು ಅದರ ಸದುಪಯೋಗ ಪಡೆದುಕೊಳ್ಳುವಂತೆ ಮಾನವ ಹಕ್ಕು ರಕ್ಷಣಾ ಸಮಿತಿ ಜಿಲ್ಲಾಧ್ಯಕ್ಷ ಜೀವನ್ ಗೌಡ ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಲವು ವರ್ಷಗಳಿಂದ ಮಾನವ ಹಕ್ಕುಗಳ ರಕ್ಷಣೆ ಹಾಗೂ ವಿವಿಧ ಸಮಾಜಮುಖಿ ಸೇವಾ ಚಟುವಟಿಕೆಗಳನ್ನು ನಡೆಸಿಕೊಂಡು ಬರುತ್ತಿರುವ ಮಾನವ ಹಕ್ಕು ರಕ್ಷಣಾ ಸಮಿತಿಯು, ತನ್ನ ಸೇವಾ ಕಾರ್ಯದ ಮುಂದುವರಿದ ಭಾಗವಾಗಿ ಹಾಸನದ ಪುಣ್ಯ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯ ಸಹಯೋಗದಲ್ಲಿ ಬೆಳಗ್ಗೆ 9ರಿಂದ ಸಂಜೆ 4ರ ವರೆಗೆ ಬೃಹತ್ ಆರೋಗ್ಯ ತಪಾಸಣಾ ಶಿಬಿರ ಹಮ್ಮಿಕೊಂಡಿದೆ ಎಂದು ತಿಳಿಸಿದರು.

ಶಿಬಿರದಲ್ಲಿ ವಿವಿಧ ವಿಭಾಗಗಳ ತಜ್ಞ ವೈದ್ಯರು ಆರೋಗ್ಯ ತಪಾಸಣೆ ನಡೆಸಲಿದ್ದು, ಅಗತ್ಯವಿರುವವರಿಗೆ ಉಚಿತ ಔಷಧಿಗಳನ್ನು ವಿತರಿಸಲಾಗುತ್ತದೆ.

ಅಲ್ಲದೆ, ಭಾಗವಹಿಸುವವರಿಗೆ ಬೆಳಗಿನ ಉಪಾಹಾರ ಹಾಗೂ ಮಧ್ಯಾಹ್ನದ ಊಟದ ವ್ಯವಸ್ಥೆ ಮಾಡಲಾಗಿದೆ. ಹೆಚ್ಚಿನ ಚಿಕಿತ್ಸೆಯ ಅಗತ್ಯವಿರುವ ರೋಗಿಗಳಿಗೆ ಹಾಸನದ ಪುಣ್ಯ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಶೇ.60 ರಿಯಾಯಿತಿ ದರದಲ್ಲಿ ಚಿಕಿತ್ಸೆ ಪಡೆಯುವ ಅವಕಾಶ ಕಲ್ಪಿಸಲಾಗಿದೆ ಎಂದು ಹೇಳಿದರು.

ಸಮಿತಿಯ ತಾಲೂಕು ಕಾರ್ಯದರ್ಶಿ ಪ್ರದೀಪ್



ಮಾತನಾಡಿ, ಮೂಳೆ ಮತ್ತು ಕೀಲು, ಮೂತ್ರಪಿಂಡ, ಹೃದಯ, ದಂತ, ಮಕ್ಕಳ, ಸಾಮಾನ್ಯ ವೈದ್ಯಕೀಯ, ಸಾಮಾನ್ಯ ಶಸ್ತ್ರಚಿಕಿತ್ಸೆ, ಚರ್ಮರೋಗ, ನರರೋಗ, ಮಧುಮೇಹ, ಕಿವಿ-ಮೂಗು-ಗಂಟಲು ಹಾಗೂ ಕಣ್ಣಿನ ತಜ್ಞರು ಸೇರಿ ವಿವಿಧ ವಿಭಾಗಗಳ ವೈದ್ಯರು ಶಿಬಿರದಲ್ಲಿ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಸುಮಾರು 2,000 ಮಂದಿಗೆ ಉಚಿತ ಆರೋಗ್ಯ ತಪಾಸಣೆ ನಡೆಸುವ ಗುರಿ ಹೊಂದಲಾಗಿದ್ದು, ಅಗತ್ಯವಿರುವವರಿಗೆ ಸ್ಥಳದಲ್ಲೇ ಉಚಿತ ಔಷಧಿಗಳನ್ನು ವಿತರಿಸಲಾಗುತ್ತದೆ. ಶಿಬಿರಾರ್ಥಿಗಳ ಅನುಕೂಲಕ್ಕಾಗಿ ಉಚಿತ ಅಂಬುಲೆನ್ಸ್ ಸೇವೆ, ಬೆಳಗಿನ ಉಪಾಹಾರ ಹಾಗೂ ಮಧ್ಯಾಹ್ನದ ಊಟದ ವ್ಯವಸ್ಥೆಯನ್ನೂ ಕಲ್ಪಿಸಲಾಗಿದೆ ಎಂದು ಹೇಳಿದರು.

ಮಾನವ ಹಕ್ಕು ರಕ್ಷಣಾ ಸಮಿತಿಯ ತಾಲೂಕು ಅಧ್ಯಕ್ಷ ವಿಜಿಕುಮಾರ್, ಕಾರ್ಯದರ್ಶಿ ಕಿಟ್ಟಿ, ವ್ಯವಸ್ಥಾಪಕ ರಘು ಹಾಗೂ ಸಮಿತಿಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

## ಸಕಲೇಶಪುರದಲ್ಲಿ ಡಿಸಿ ಲತಾಕುಮಾರಿ ಸಂಚಾರ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಅವರು ಮಂಗಳವಾರ ಪಟ್ಟಣದಲ್ಲಿ ಸಂಚಾರ ನಡೆಸಿದರು.

ಪಟ್ಟಣದ ತೇಜಸ್ವಿ ವೃತ್ತ, ಮಳಲಿ ಬೈಪಾಸ್, ಹಳೆ ಬಸ್ ನಿಲ್ದಾಣ, ಎಸ್‌ಬಿಐ ವೃತ್ತದ ಸಮೀಪ ಮಂಗಳವಾರ ನಿರ್ಮಾಣ ಹಂತದಲ್ಲಿರುವ ಫುಡ್ ಕೋರ್ಟ್ ಸ್ಥಳ, ಸುಭಾಷ್ ಕ್ರೀಡಾಂಗಣದ ಬಳಿಯ ತ್ಯಾಜ್ಯ ವಿಲೇವಾರಿ ಪ್ರದೇಶ ಸೇರಿ ವಿವಿಧ ಸ್ಥಳಗಳಿಗೆ ಭೇಟಿ ನೀಡಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವೇಗವಾಗಿ ಬೆಳೆಯುತ್ತಿರುವ ಸಕಲೇಶಪುರ ಪಟ್ಟಣದ ಜನಸಂಖ್ಯೆ ಹಾಗೂ ವಾಹನಗಳ ಸಂಖ್ಯೆಗೆ ಅನುಗುಣವಾಗಿ ಮೂಲಸೌಕರ್ಯ ಅಭಿವೃದ್ಧಿಪಡಿಸುವುದು ಅತ್ಯಗತ್ಯ. 2011ರಲ್ಲಿ ಸುಮಾರು 25 ಸಾವಿರ ಜನಸಂಖ್ಯೆ ಹೊಂದಿದ್ದ ಸಕಲೇಶಪುರದಲ್ಲಿ ಪ್ರಸ್ತುತ 35 ರಿಂದ 40 ಸಾವಿರಕ್ಕೂ ಅಧಿಕ ಜನಸಂಖ್ಯೆ ಇದೆ. ಆದರೆ ಬಸ್ ನಿಲ್ದಾಣ, ರಸ್ತೆ ಸೇರಿ ಬಹುತೇಕ ಮೂಲಸೌಕರ್ಯಗಳು ಎರಡು ದಶಕಗಳ ಹಿಂದಿನ ಅಗತ್ಯಕ್ಕೆ ಅನುಗುಣವಾಗಿ ನಿರ್ಮಾಣಗೊಂಡಿವೆ. ಮಲೆನಾಡಿನ ಪ್ರಮುಖ ಪ್ರವಾಸಿ ತಾಣವಾಗಿರುವ ಕಾರಣ ವಾಹನಗಳ ಓಡಾಟವೂ ಗಣನೀಯವಾಗಿ ಹೆಚ್ಚಿದ್ದು, ನಗರದಲ್ಲಿನ ಮೂಲಸೌಕರ್ಯಗಳ ಮೇಲಿನ ಒತ್ತಡ ಹೆಚ್ಚಾಗಿದೆ ಎಂದು ತಿಳಿಸಿದರು.

ಕೊಲ್ಲಹಳ್ಳಿ ಗ್ರಾಮದಿಂದ ಆನೆಮಹಲ್ ಗ್ರಾಮದ ವರೆಗೆ ರಸ್ತೆ ವಿಸ್ತರಣೆಗೆ ಇರುವ ಸಾಧಕ-ಬಾಧಕಗಳ ಕುರಿತು ಒಂದು ವಾರದೊಳಗೆ ಸಮಗ್ರ ವರದಿ ಸಲ್ಲಿಸುವಂತೆ ತಾಲ್ಲೂಕು ಆಡಳಿತಕ್ಕೆ ಸೂಚನೆ ನೀಡಲಾಗಿದೆ. ಬೈಪಾಸ್ ರಸ್ತೆ ಇದ್ದರೂ ಪಟ್ಟಣದೊಳಗಿನ ವಾಹನ ದಟ್ಟಣೆ ಕಡಿಮೆಯಾಗದಿರುವ ಹಿನ್ನಲೆಯಲ್ಲಿ ರಸ್ತೆ ವಿಸ್ತರಣೆ ಕುರಿತು ಕ್ರಮ ಕೈಗೊಳ್ಳಲಾಗುವುದೆಂದರು.

ಪಟ್ಟಣದ ಪ್ರಮುಖ ಸಂಚಾರ ಕೇಂದ್ರವಾಗಿರುವ ತೇಜಸ್ವಿ ವೃತ್ತದಲ್ಲಿ ಹಾಸನ, ಬೇಲೂರು ಹಾಗು ಮಂಗಳೂರು ರಸ್ತೆಗಳು ಸೇರುವುದರಿಂದ ವಾಹನ ದಟ್ಟಣೆ ಮತ್ತು ಅಪಘಾತಗಳ ಸಾಧ್ಯತೆ ಹೆಚ್ಚಿದೆ. ಆದ್ದರಿಂದ ವೃತ್ತದ ಅಗಲೀಕರಣ, ಹೈಮಾಸ್ಟ್ ದೀಪ, ಟ್ರಾಫಿಕ್ ಸಿಗ್ನಲ್, ದಿಕ್ಕು ಸೂಚನಾ ಫಲಕ, ಮಾಹಿತಿ ಫಲಕ, ವೇಗ ನಿಯಂತ್ರಕಗಳು ಸೇರಿ ಸಂಚಾರ ಸುರಕ್ಷತೆಗೆ ಅಗತ್ಯ ಸೌಲಭ್ಯಗಳನ್ನು ಒಳಗೊಂಡ ಸಮಗ್ರ ಯೋಜನೆ ರೂಪಿಸಲಾಗುವುದು ಎಂದು ಭರವಸೆ ನೀಡಿದರು.

1988ರಲ್ಲಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಭೂಸ್ವಾಧೀನಪಡಿಸಿಕೊಂಡಿದ್ದ ಮಳಲಿ ಬೈಪಾಸ್‌ನಿಂದ ತೇಜಸ್ವಿ ವೃತ್ತಕ್ಕೆ ಸಂಪರ್ಕಿಸುವ ರಸ್ತೆಯ ಸಾಧ್ಯತೆಯನ್ನು ಪರಿಶೀಲಿಸುವಂತೆ ಉಪವಿಭಾಗಾಧಿಕಾರಿಗೆ ನಿರ್ದೇಶನ ನೀಡಲಾಗಿದೆ. ಭೂಮಿ ಲಭ್ಯವಿದ್ದರೆ ರಸ್ತೆ ಅಭಿವೃದ್ಧಿಗೆ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಹಳೆ ಬಸ್ ನಿಲ್ದಾಣದ ಎದುರು ನಿರ್ಮಾಣ ಹಂತದಲ್ಲಿರುವ ಬಸ್ ತಂಗುದಾಣದ ದಾಖಲೆಗಳನ್ನು ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು. ಎಸ್‌ಬಿಐ ವೃತ್ತದ ಸಮೀಪ ನಿರ್ಮಿಸಲು ಉದ್ದೇಶಿಸಿರುವ ಫುಡ್ ಕೋರ್ಟ್ ಸ್ಥಳದಲ್ಲಿ ಈಗಾಗಲೇ ವಾಹನ ದಟ್ಟಣೆ ಹೆಚ್ಚಿರುವುದರಿಂದ, ಸಾರ್ವಜನಿಕರಿಗೆ ತೊಂದರೆಯಾಗದ ರೀತಿಯಲ್ಲಿ ಪರ್ಯಾಯ ಸ್ಥಳ ಗುರುತಿಸಿ ಅಂತಿಮ ನಿರ್ಧಾರ ಕೈಗೊಳ್ಳಲಾಗುವುದೆಂದರು.

## ಸಕಲೇಶ್ವರ ಸ್ವಾಮಿ ಜಾತ್ರೆಯಿಂದ 30.95 ಲಕ್ಷ ರೂ. ಉಳಿಕೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಸಕಲೇಶ್ವರ ಸ್ವಾಮಿ ಜಾತ್ರಾ ಮಹೋತ್ಸವವನ್ನು ಪಾರದರ್ಶಕತೆ, ಶಿಸ್ತು ಮತ್ತು ಸೇವಾಭಾವದಿಂದ ಆಯೋಜಿಸಿರುವುದಕ್ಕೆ ಈ ಬಾರಿ 30,95,508 ರೂ. ಉಳಿಕೆಯೇ ಸಾಕ್ಷಿ ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

ಪಟ್ಟಣದ ಸಕಲೇಶ್ವರಸ್ವಾಮಿ ಆವರಣದಲ್ಲಿ ಮಂಗಳವಾರ ಆಯೋಜಿಸಿದ್ದ ಜಾತ್ರಾ ಮಹೋತ್ಸವ ಮತ್ತು ರಥೋತ್ಸವ ಕಾರ್ಯಕ್ರಮ ಜಮಾ, ಖರ್ಚು ಮಂಡನೆ ಸಭೆಯಲ್ಲಿ ಮಾತನಾಡಿದ ಅವರು, ಸಕಲೇಶ್ವರ ಸ್ವಾಮಿ ಈ ಭಾಗದ ಆರಾಧ್ಯ ದೈವವಾಗಿದ್ದು, ಸಕಲೇಶಪುರ ಎಂಬ ಹೆಸರಿಗೂ ಸ್ವಾಮಿಯ ಹೆಸರೇ ಕಾರಣವಾಗಿದೆ. ಈ ಭಾಗದ ಜನರ ಬದುಕು, ಭಕ್ತಿ ಮತ್ತು ಸಂಸ್ಕೃತಿ ಸ್ವಾಮಿಯ ಆಶೀರ್ವಾದದೊಂದಿಗೆ ಬೆಸೆದುಕೊಂಡಿದೆ ಎಂದು ಹೇಳಿದರು.

ಜಾತ್ರೆಯನ್ನು ದೇವಸ್ಥಾನ ಸಮಿತಿಯೇ ನಡೆಸಬೇಕು ಎಂಬ ಸಾರ್ವಜನಿಕರ ಬಹುಕಾಲದ ಆಶಯವನ್ನು ಸಮಿತಿ ಸಾಕಾರಗೊಳಿಸಿದೆ. ಪುರಸಭೆಯಲ್ಲಿ ಸೂಕ್ತ ಜಾಗದ ಕೊರತೆ ಇದ್ದರೂ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ, ದೇವಸ್ಥಾನ ಸಮಿತಿಯೇ ಜಾಗವನ್ನು ಒಪ್ಪಂದದ ಮೂಲಕ ಪಡೆದು ವಸ್ತು ಪ್ರದರ್ಶನವನ್ನು ಯಶಸ್ವಿಯಾಗಿ ಆಯೋಜಿಸಿದೆ ಎಂದು ತಿಳಿಸಿದರು.

ನಾನು ಶಾಸಕನಾದ ನಂತರ ನಡೆದ ಮೂರು ಜಾತ್ರೆಗಳಲ್ಲೂ ಸಮಿತಿ ಅತ್ಯುತ್ತಮ ಆರ್ಥಿಕ ಶಿಸ್ತು ಪ್ರದರ್ಶಿಸಿದೆ. ಮೊದಲ ವರ್ಷ ಸುಮಾರು 16 ಲಕ್ಷ ರೂ., ಎರಡನೇ ವರ್ಷ 18 ಲಕ್ಷ ರೂ. ಹಾಗೂ ಈ ಬಾರಿ ಎಲ್ಲ ವೆಚ್ಚಗಳನ್ನು ಭರಿಸಿದ ಬಳಿಕವೂ ದಾಖಲೆಯ 30,95,508 ರೂ. ಉಳಿದಿದೆ. ಯಾವುದೇ ಪ್ರತಿಫಲದ ನಿರೀಕ್ಷೆಯಿಲ್ಲದೆ ದುಡಿದ ಸಮಿತಿಯ ಸದಸ್ಯರ ತಂಡದ ಕಾರ್ಯ, ಪ್ರಾಮಾಣಿಕತೆ ಮತ್ತು ಪಾರದರ್ಶಕ ಆಡಳಿತದಿಂದಲೇ ಈ ಸಾಧನೆ ಸಾಧ್ಯವಾಗಿದೆ. ಇದು ಸಾಮಾನ್ಯ ಸಾಧನೆಯಲ್ಲ; ಸಾರ್ವಜನಿಕರ ಹಣವನ್ನು ಜವಾಬ್ದಾರಿಯಿಂದ ನಿರ್ವಹಿಸಿದ ಅತ್ಯುತ್ತಮ ಮಾದರಿಯಾಗಿದೆ ಎಂದು ಶಾಸಕ ಸಿಮೆಂಟ್ ಮಂಜು ಮೆಚ್ಚುಗೆ ವ್ಯಕ್ತಪಡಿಸಿದರು.

ಜಾತ್ರೆಯ ಉದ್ದೇಶ ಕೇವಲ ಆದಾಯ ಗಳಿಸುವುದಲ್ಲ, ಸಮಾಜದ ಎಲ್ಲ ವರ್ಗದ ಜನರು ಸಂಭ್ರಮಿಸುವಂತಾಗಬೇಕು ಎಂಬುದು. ಬಡ ಕುಟುಂಬಗಳ ಮಕ್ಕಳು ವರ್ಷಕ್ಕೊಮ್ಮೆ ಜಾತ್ರೆಗೆ ಬಂದು ಸಂತೋಷದಿಂದ ಆಟವಾಡುವ ಅವಕಾಶ ಕಳೆದುಕೊಳ್ಳಬಾರದು ಎಂಬ ಉದ್ದೇಶದಿಂದ ಅಮ್ಯೂಸ್‌ಮೆಂಟ್ ಆಟಗಳ ದರವನ್ನು ಕೈಗೆಟುಕುವ ಮಟ್ಟದಲ್ಲೇ ನಿಗದಿಪಡಿಸಲಾಗಿದೆ. ಇದರಿಂದ ಸಾವಿರಾರು ಮಕ್ಕಳು ಮತ್ತು ಕುಟುಂಬಗಳು ಕಡಿಮೆ ವೆಚ್ಚದಲ್ಲಿ ಜಾತ್ರೆಯ ಸಂಭ್ರಮವನ್ನು ಅನುಭವಿಸಲು ಸಾಧ್ಯವಾಗಿದೆ ಎಂದು ಹೇಳಿದರು.

ತಹಸೀಲ್ದಾರ್ ಸುಪ್ರಿತಾ, ತಾಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಗಂಗಾಧರನ್, ಪುರಸಭಾ ಮುಖ್ಯ ಅಧಿಕಾರಿ ಮಹೇಶ್ವರಪ್ಪ, ಸಕಲೇಶ್ವರ ಸ್ವಾಮಿ ಭಕ್ತ ಮಂಡಳಿ ಅಧ್ಯಕ್ಷ ಬ್ಯಾಕರವಳ್ಳಿ ಜಯಣ್ಣ, ಉತ್ಸವ ಸಮಿತಿ ಕಾರ್ಯದರ್ಶಿ ಅವಿನಾಶ್, ಖಜಾಂಚಿ ಮೋಹನ್, ಮಾಜಿ ಸಂಚಾಲಕ ನಂದಿ ಕೃಪಾ ದೇವರಾಜು, ವ್ಯವಸ್ಥಾಪನ ಸಮಿತಿಯ ಮಾಜಿ ಅಧ್ಯಕ್ಷ ಮಹೇಶ್ ಇತರರಿದ್ದರು.

## ಹೆಗ್ಗಡಿಹಳ್ಳಿ ದೊಡ್ಡಮ್ಮ ದೇವಿಗೆ ವಿಶೇಷ ಪೂಜೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ತಾಲ್ಲೂಕಿನ ಹಿರೀಸಾವೆ ಹೋಬಳಿ ಹೆಗ್ಗಡಿಹಳ್ಳಿ ಗ್ರಾಮದಲ್ಲಿ ಶ್ರೀ ದೊಡ್ಡಮ್ಮ ದೇವಿಯ ಹಬ್ಬವನ್ನು ಮಂಗಳವಾರ ಭಕ್ತರು ಶ್ರದ್ಧಾ ಭಕ್ತಿಯಿಂದ ಆಚರಿಸಿದರು.

ಗ್ರಾಮದ ಹೆಣ್ಣು ಮಕ್ಕಳು ತಂಬಿಟ್ಟಿನ ಆರತಿ ಹಾಗೂ ಹಣ್ಣು-ಕಾಯಿ ತಂದು ದೇಗುಲದ ಮುಂದೆ ವಿಶೇಷ ಪೂಜೆ ಸಲ್ಲಿಸಿ ಆರತಿ ಬೆಳಗಿದರು. ದೇವಿಗೆ ಪ್ರಿಯವಾದ ದಾಸವಾಳ ಹೂವು ಹಾಗೂ ಬೇವಿನ ಪತ್ರೆ ಅರ್ಪಿಸಿ ಭಕ್ತಿ ಭಾವದಲ್ಲಿ ತೇಲಿದರು.

ಅರ್ಚಕರಿಲ್ಲದ ದೇಗುಲ: ಸುಮಾರು 150 ವರ್ಷಗಳಿಗೂ ಮೀರಿದ ಐತಿಹಾಸಿಕ ಹಿನ್ನೆಲೆ ಹೊಂದಿದ್ದರೂ ದೇಗುಲಕ್ಕೆ ಅಧಿಕೃತವಾಗಿ ಅರ್ಚಕರಿಲ್ಲ. ಇನ್ನು ಧಾರ್ಮಿಕ ದತ್ತಿ ಹಾಗೂ ಮುಜರಾಯಿ ಇಲಾಖೆ ವ್ಯಾಪ್ತಿಗೆ ಒಳಪಟ್ಟಿಲ್ಲ. ಪರಿಣಾಮ ರಸ್ತೆ, ನೀರು ಹಾಗೂ ವಿದ್ಯುತ್ ವ್ಯವಸ್ಥೆ ಸೇರಿ ಯಾವ ೯ ಸೌಲಭ್ಯಗಳಿಲ್ಲದರ ಜೊತೆಗೆ ದೈನಂದಿನ ಪೂಜೆ ಇಲ್ಲದೆ ಅನಾಥವಾಗಿ ದೇಗುಲವು ಸೊರಗುತ್ತಿದೆ ಎಂಬುದು ಭಕ್ತರ ಆರೋಪ.

150 ವರ್ಷಗಳಿಗೂ ಅಧಿಕ ಇತಿಹಾಸ ಹೊಂದಿದ್ದರೂ ದೊಡ್ಡಮ್ಮ ದೇವಿಯ ದೇಗುಲವು ಚಿಕ್ಕ ಕಲ್ಲಿನ ಗೂಡಿನಂತೆ ಇದ್ದು ಕಳೆದ 15 ವರ್ಷಗಳ ಹಿಂದೆ ಗ್ರಾಮಸ್ಥರು ಸೇರಿ ದೇಗುಲವನ್ನು ಅಭಿವೃದ್ಧಿ ಪಡಿಸಲು ಮುಂದಾದರು. ಅಂದಿನ ಶಾಸಕ ಸಿ.ಎಸ್.ಪುಟ್ಟೇಗೌಡ ಅವರು ನೀಡಿದ



ಅನುದಾನದ ಜೊತೆಗೆ ಭಕ್ತರು ಕೈ ಜೋಡಿಸಿ ದೇವಾಲಯ ನಿರ್ಮಾಣಗೊಳಿಸಿ ಲೋಕಾರ್ಪಣೆ ಮಾಡಿದರು.

ಆದರೆ ನಿರ್ವಹಣೆ ಮತ್ತು ಪೂಜೆ ಮುಂದುವರಿಯಲಿಲ್ಲ. ಸದ್ಯಕ್ಕೆ ಗ್ರಾಮದ ರಾಜಯ್ಯ ಎಂಬವರ ಮಗಳು ವಿನೋದಮ್ಮ ಅವರು ವಾರಕ್ಕೊಮ್ಮೆ ಮಂಗಳವಾರ ದೇಗುಲವನ್ನು ಸ್ವಚ್ಛಗೊಳಿಸಿ ಪೂಜೆ ಸಲ್ಲಿಸುತ್ತಿದ್ದಾರೆ.

ದೇಗುಲಕ್ಕೆ ಅಧಿಕೃತವಾಗಿ ಅರ್ಚಕರಿಲ್ಲದ ಕಾರಣ ಸದ್ಯಕ್ಕೆ ಭಕ್ತರು ತಾವೇ ಪೂಜೆ ಸಲ್ಲಿಸಬೇಕಿದೆ. ಸಂಬಂಧಪಟ್ಟ ಅಧಿಕಾರಿಗಳು ಇತ್ತ ಗಮನಹರಿಸಿ ದೇಗುಲವನ್ನು ಧಾರ್ಮಿಕ ದತ್ತಿ ಇಲ್ಲವೇ ಮುಜರಾಯಿ ಇಲಾಖೆಗೆ ಒಳಪಡಿಸಿ ಅಗತ್ಯ ಸೌಲಭ್ಯಗಳನ್ನು ಕಲ್ಪಿಸುವುದರ ಜೊತೆಗೆ ದೈನಂದಿನ ಪೂಜೆ ಸಲುವಾಗಿ ಅರ್ಚಕರನ್ನು ನೇಮಕಗೊಳಿಸುವ ಮೂಲಕ ಸರ್ವತೋಮುಖ ಅಭಿವೃದ್ಧಿಗೆ ಮುಂದಾಗಬೇಕು ಎಂಬುದು ಸ್ಥಳೀಯರ ಮನವಿಯಾಗಿದೆ.

## ಸಂಸ್ಕಾರ-ಸನಾತನ ಪರಂಪರೆ ಮಕ್ಕಳ ಶಿಕ್ಷಣದಲ್ಲಿರಲಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಸನಾತನ ಪರಂಪರೆಯೊಂದಿಗೆ ಸಂಸ್ಕಾರವು ಮಕ್ಕಳ ಶಿಕ್ಷಣದಲ್ಲಿ ಅಡಕವಾಗಿರಬೇಕು ಎಂದು ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಡಾ. ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಹೇಳಿದರು.

ಪಟ್ಟಣದ ಬಿಜಿಎಸ್ ಸಮುದಾಯ ಭವನದಲ್ಲಿ ಆದಿಚುಂಚನಗಿರಿ ಸಮೂಹ ಶಿಕ್ಷಣ ಸಂಸ್ಥೆಯ ಕಬಳಿ, ಅಣತಿ ಹಾಗೂ ಚನ್ನರಾಯಪಟ್ಟಣದ ಶ್ರೀ ಬಾಲಗಂಗಾಧರನಾಥ ಆಂಗ್ಲ ಮಾಧ್ಯಮ ಶಾಲೆಯ ವತಿಯಿಂದ ಮಂಗಳವಾರ ಹಮ್ಮಿಕೊಂಡಿದ್ದ ಜ್ಞಾನಾಂಕುರ ಕಾರ್ಯಕ್ರಮದಲ್ಲಿ ಮಕ್ಕಳಿಗೆ ಅಕ್ಷರಾಭ್ಯಾಸ ಮಾಡಿಸಿ ಆಶೀರ್ವಚನ ನೀಡಿದರು.

ಸಂಸ್ಕಾರ ಪಡೆದ ಮಗು ಎಂದಿಗೂ ಸೋಲುವುದಿಲ್ಲ. ಮಕ್ಕಳ ಮನಸ್ಸಿನಲ್ಲಿ ಬಿತ್ತಿದ ಅಕ್ಷರ ಜ್ಞಾನವು ಭವಿಷ್ಯದಲ್ಲಿ ಉತ್ತಮ ಫಲ ಕೊಡುತ್ತದೆ. ಆದ್ದರಿಂದ ಧಾರ್ಮಿಕ, ಆಧ್ಯಾತ್ಮಿಕ ಮೌಲ್ಯಗಳೊಂದಿಗೆ ಅಕ್ಷರಾಭ್ಯಾಸ ಮಾಡಿಸುವ ಮೂಲಕ ಮಕ್ಕಳಲ್ಲಿ ಸಂಸ್ಕಾರಗಳನ್ನು ಬಿತ್ತುವ ಕಾರ್ಯವು ಶುಭಾರಂಭವಾಗಿದೆ. ಮಕ್ಕಳ



ಶೈಕ್ಷಣಿಕ ಬೆಳವಣಿಗೆಗೆ ಶಾಲೆಯಲ್ಲಿ ಸಿಗುವ ಪಠ್ಯ ಶಿಕ್ಷಣದ ಜೊತೆಗೆ ಮನೆಯಲ್ಲಿ ಪಾಲಕರು ನೀಡುವ ಸಂಸ್ಕಾರದ ಶಿಕ್ಷಣವೂ ಬಹಳ ಮುಖ್ಯ ಎಂದರು.

ಮನೆಯಲ್ಲಿ ಪೋಷಕರು, ಶಾಲೆಯಲ್ಲಿ ಶಿಕ್ಷಕರು ಎರಡೂ ಕಡೆ ಶಿಸ್ತುಬದ್ಧ ಮಾರ್ಗದರ್ಶನವೇ ಮಗುವಿನ ಸರ್ವಾಂಗೀಣ ಬೆಳವಣಿಗೆಗೆ ಆಧಾರ. ಪೋಷಕರು ಹಣ-ಆಸ್ತಿಗಿಂತ ಮಕ್ಕಳನ್ನೇ ಶ್ರೇಷ್ಠ ಆಸ್ತಿಯನ್ನಾಗಿ ರೂಪಿಸಬೇಕು. ಮನೆಯೇ ಮೊದಲ ಪಾಠ ಶಾಲೆ. ತಾಯಿ-ತಂದೆಯೇ ಮೊದಲ ಗುರು.

23 ವರ್ಷದವರೆಗೆ ಮಕ್ಕಳ ಮೇಲೆ ಸೂಕ್ಷ್ಮ ನಿಗಾ ಇಟ್ಟು ಶಿಸ್ತು ಕಲಿಸಿದರೆ ಅವರು ಸ್ವಾವಲಂಬಿಗಳಾಗಿ, ಸತ್ಪ್ರಜೆಗಳಾಗುತ್ತಾರೆ. ಶಾಲೆಯಲ್ಲಿ ಪಠ್ಯ ಶಿಕ್ಷಣವು ಜ್ಞಾನವನ್ನು ನೀಡಿದರೆ, ಮನೆಯಲ್ಲಿ ಸಂಸ್ಕಾರದ ಶಿಕ್ಷಣವು ಮಗುವಿನ ವ್ಯಕ್ತಿತ್ವ ರೂಪಿಸುತ್ತದೆ. ಸಂಸ್ಕಾರಯುತ ಶಿಕ್ಷಣವು ಮಗುವಿನ ನಡವಳಿಕೆ, ಮೌಲ್ಯಗಳು ಮತ್ತು ಸಾಮಾಜಿಕ ಕೌಶಲ್ಯಗಳನ್ನು ರೂಪಿಸುತ್ತದೆಂದು ತಿಳಿಸಿದರು.

ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಹಾಸನ ಮತ್ತು ಕೊಡಗು ಶಾಖಾಮಠದ ಕಾರ್ಯದರ್ಶಿ ಶ್ರೀ ಶಂಭುನಾಥ ಸ್ವಾಮೀಜಿ, ಕಬಳಿ ಬಿಜಿಎಸ್ ಆಂಗ್ಲ ಮಾಧ್ಯಮ ಶಾಲೆಯ ಮುಖ್ಯ ಶಿಕ್ಷಕ ತಿಮ್ಮೇಗೌಡ, ಅಣತಿ ಬಿಜಿಎಸ್ ಶಾಲೆಯ ಮುಖ್ಯ ಶಿಕ್ಷಕಿ ಭಾರತಿ, ಚನ್ನರಾಯಪಟ್ಟಣ ಬಿಜಿಎಸ್ ಶಾಲೆಯ ಪ್ರಾಂಶುಪಾಲ ಸಿ.ಸಿ.ಕುಮಾರ್ ಇತರರಿದ್ದರು.

### ಶಾಲೆಗೆ ಕಳುಹಿಸಿದರೆ ಜವಾಬ್ದಾರಿ ಮುಗಿಯಲ್ಲ

ಪಾಲಕರು ತಮ್ಮ ಮಕ್ಕಳೊಂದಿಗೆ ಉತ್ತಮ ನಡವಳಿಕೆ, ಸಭ್ಯತೆ, ಗೌರವ ಮತ್ತು ಇತರ ಮೌಲ್ಯಗಳನ್ನು ಹಂಚಿಕೊಳ್ಳಬೇಕು. ಇದು ಮಗುವಿಗೆ ಜೀವನದುದ್ದಕ್ಕೂ ಸಹಾಯ ಮಾಡುತ್ತದೆ. ನಮ್ಮ ಮಕ್ಕಳಲ್ಲಿ ಸಂಸ್ಕಾರ ಬೆಳೆಸಬೇಕಾಗಿದೆ. ಅದಕ್ಕೆ ಪಾಲಕರು ಸಂಸ್ಕೃತಿ ಪಾಲನೆ ಮಾಡುವುದು ಅಗತ್ಯವಾಗಿದೆ. ಪಾಲಕರು ತಮ್ಮ ಮಕ್ಕಳನ್ನು ಅಕ್ಷರಾಭ್ಯಾಸ ಮಾಡಿಸಿ ಉತ್ತಮ ಪ್ರಜೆಯಾಗಬೇಕೆಂಬ ಆಸೆ ಹೊಂದಿರುತ್ತಾರೆ. ಕೇವಲ ಶಾಲೆಗೆ ಕಳುಹಿಸಿದ ಮಾತ್ರಕ್ಕೆ ಪಾಲಕರ ಪಾತ್ರ ಮುಗಿಯುವುದಿಲ್ಲ.

ತಂದೆ-ತಾಯಿಯೇ ಮಕ್ಕಳಿಗೆ ಮೊದಲ ಗುರು. ಪಾಲಕರು ಮಕ್ಕಳ ಚಟುವಟಿಕೆ ಬಗ್ಗೆ ಪ್ರತಿದಿನ ಗಮನಹರಿಸಬೇಕು. ಮಕ್ಕಳು ಶಾಲೆಯಲ್ಲಿ ಗುರುಗಳು ಹೇಳಿದ್ದನ್ನು ಕೇಳುವುದಕ್ಕಿಂತ ಹೆಚ್ಚಾಗಿ ಪೋಷಕರನ್ನು ಅನುಕರಣೆ ಮಾಡಿ ಕಲಿಯುವುದು ಹೆಚ್ಚು ಹಾಗಾಗಿ ಪ್ರತಿಯೊಬ್ಬ ಪೋಷಕರು ಮಕ್ಕಳ ಮುಂದೆ ಸಂಸ್ಕಾರಯುತವಾಗಿ ನಡೆದುಕೊಳ್ಳಬೇಕು.

ಯಾವುದೇ ಕಾರಣಕ್ಕೂ ಮಕ್ಕಳ ಮುಂದೆ ಜಗಳವಾಡಬಾರದು ಎಂದು ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಹೇಳಿದರು.

ಕನ್ನಡ ಪೋಸ್ಟ್

E-mail : kannadapostnews@gmail.com facebook.com / ಕನ್ನಡ post



# ಒಬ್ಬರು ರಸ್ತೆ ಗುಂಡಿ ಮುಚ್ತಾರೆ ಮತ್ತೊಬ್ಬರು ಅಗೆಯುತ್ತಾರೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರದ ಎಲ್ಲೆಂದರಲ್ಲಿ ಕಾಮಗಾರಿ ನೆಪದಲ್ಲಿ ರಸ್ತೆ ಅಗೆಯಲಾಗುತ್ತಿದ್ದು, ತಿಂಗಳ ಹಿಂದಷ್ಟೇ ಡಾಂಬರು ಕಂಡ ರಸ್ತೆಗಳು ಸಹ ಮತ್ತೆ ಗುಂಡಿಮಯವಾಗಿರುವುದಕ್ಕೆ ವಾಹನ ಸವಾರರು, ನಾಗರಿಕರು ಅಕ್ಷರಶ: ಬೇಸತ್ತು ಹೋಗಿದ್ದಾರೆ.



ರಸ್ತೆ ಸುಧಾರಣೆ ಕಾಮಗಾರಿ ಪೂರ್ಣಗೊಂಡಿತು ಎನ್ನುವಷ್ಟರಲ್ಲಿ ಮತ್ತೊಂದು ಕಾಮಗಾರಿಗೆ ಅದೇ ರಸ್ತೆ ಅಗೆದು ಅವ್ಯವಸ್ಥೆ ಮಾಡುವುದು ಹೆಚ್ಚುತ್ತಿದೆ. ನಗರದ ಪ್ರಮುಖ ರಸ್ತೆಗಳಲ್ಲೂ ಕುಡಿಯುವ ನೀರಿನ ಪೈಪ್ ಲೈನ್ ಅಳವಡಿಕೆ, ಒಳಚರಂಡಿ ಕಾಮಗಾರಿ, ವಿದ್ಯುತ್ ಕೇಬಲ್ ಸಂಪರ್ಕ ಸೇರಿ ವಿವಿಧ ಕಾಮಗಾರಿಗಳ ಹೆಸರಿನಲ್ಲಿ ರಸ್ತೆಗಳನ್ನು ಅಗೆದು ಹಾಗೇ ಬಿಡಲಾಗುತ್ತಿದೆ. ಹಲವೆಡೆ ಹೊಸದಾಗಿ ನಿರ್ಮಿಸಿದ ರಸ್ತೆಗಳನ್ನೇ ಮತ್ತೆ ಅಗೆದು ಹಾಕುತ್ತಿರುವುದು ಮಹಾನಗರ ಪಾಲಿಕೆಯ ಸಮನ್ವಯದ ಕೊರತೆಗೆ ಸ್ಪಷ್ಟ ಸಾಕ್ಷಿ. ಒಂದು ಇಲಾಖೆ ರಸ್ತೆ ನಿರ್ಮಿಸಿದರೆ, ಮತ್ತೊಂದು ಇಲಾಖೆ ಅದನ್ನು ಅಗೆದು ಹಾಕುತ್ತಿದೆ. ರಸ್ತೆ ನಿರ್ಮಾಣಕ್ಕೂ ಮೊದಲು ಎಲ್ಲಾ ಇಲಾಖೆಗಳ ಕಾಮಗಾರಿಗಳನ್ನು ಏಕಕಾಲದಲ್ಲಿ ಯೋಜಿಸುವ ವ್ಯವಸ್ಥೆ ಇಲ್ಲದಿರುವುದರಿಂದ ಸಾರ್ವಜನಿಕರ ತೆರಿಗೆ ಹಣ ಮಣ್ಣುಪಾಲಾಗುತ್ತಿದೆ.

### ಅವ್ಯವಸ್ಥೆಗೆ ಯಾರು ಹೊಣೆ

ಅಗೆದ ರಸ್ತೆಗಳನ್ನು ವೈಜ್ಞಾನಿಕವಾಗಿ ಮುಚ್ಚದಿರುವ ಪರಿಣಾಮ ಮಳೆ ಬಂದರೆ ರಸ್ತೆ ಗುಂಡಿಗಳಲ್ಲಿ ನೀರು ನಿಲ್ಲುತ್ತಿದೆ. ಬಿಸಿಲು ಬಂದರೆ ಧೂಳಿನ ಕಾಟ. ಅಪಘಾತದ ಭೀತಿ, ವಾಹನಗಳ ಹಾನಿ, ವ್ಯಾಪಾರ ನಷ್ಟ ಹಾಗೂ ಪಾದಚಾರಿಗಳ ಸಂಕಷ್ಟ ನಗರದ ನಿತ್ಯದ ಸಮಸ್ಯೆಗಳಾಗಿ ಪರಿಣಮಿಸಿದೆ. ಹೀಗಾಗಿ, ಮೂಲಸೌಕರ್ಯಕ್ಕೆ ತೆರಿಗೆ ಪಾವತಿಸಿದರೂ ಪ್ರಯೋಜನ ಇಲ್ಲದಂತಾಗಿದೆ.

ಕಾಮಗಾರಿಗಳನ್ನು ಪೂರ್ಣಗೊಳಿಸಿ, ಸಮರ್ಪಕವಾಗಿ ನಿರ್ವಹಣೆ ಮಾಡುವ ಬದ್ಧತೆ ತೋರುವುದೇ ಆಡಳಿತ. ಆದರೆ, ಇಲ್ಲಿ ಮಾತ್ರ ಎಲ್ಲವೂ ತದ್ವಿರುದ್ಧ. ಈ ಅವ್ಯವಸ್ಥೆಗೆ ಹೊಣೆ ಯಾರು. ರಸ್ತೆ ನಿರ್ಮಾಣಕ್ಕೆ ಅನುಮೋದನೆ ನೀಡುವ ಮುನ್ನ ಸಂಬಂಧಿಸಿದ ಎಲ್ಲಾ ಇಲಾಖೆಗಳ ಕಾಮಗಾರಿಗಳನ್ನು ಸಮನ್ವಯಗೊಳಿಸುವ ಹೊಣೆ ಮಹಾನಗರ ಪಾಲಿಕೆಯದ್ದಲ್ಲವೇ. ಹೊಸದಾಗಿ ನಿರ್ಮಿಸಿದ ರಸ್ತೆಗಳನ್ನೇ ಮತ್ತೆ ಅಗೆಯುವುದರಿಂದ ರಕ್ಷಿಸುವ ಜವಾಬ್ದಾರಿ ಯಾರದ್ದು. ಸಾರ್ವಜನಿಕರ ತೆರಿಗೆ ಹಣ ಈ ರೀತಿ ವ್ಯರ್ಥವಾಗುತ್ತಿದ್ದರೂ ಉತ್ತರಿಸುವವರು ಯಾರೂ ಇಲ್ಲವೆಂದು 19ನೇ ವಾರ್ಡ್‌ನ ನಿವಾಸಿ, ನಿವೃತ್ತ ಶಿಕ್ಷಕಿ ಸರೋಜಮ್ಮ ಅವರು ಅಸಮಾಧಾನ ವ್ಯಕ್ತಪಡಿಸಿದರು.

### ಮಾಡಬೇಕಾದ ಕೆಲಸ ಸಾಕಷ್ಟಿದೆ

19ನೇ ವಾರ್ಡ್‌ನ ಹೇಮಾವತಿ ಆಸ್ಪತ್ರೆ ಸಮೀಪ ಅಂದಾಜು 300 ಮೀಟರ್ ರಸ್ತೆಗೆ ತಿಂಗಳ ಹಿಂದಷ್ಟೇ ಡಾಂಬರು ಹಾಕಲಾಗಿದೆ. ಆದರೆ ವಾರದ ಹಿಂದೆ ಎರಡು ಕಡೆ ಒಳಚರಂಡಿ ಮ್ಯಾನ್ ಹೋಲ್ ಗುಂಡಿ ತೋಡಲಾಗಿದೆ. ಅದರಿಂದ ರಸ್ತೆ ಸಂಪೂರ್ಣ ಗುಂಡಿಮಯವಾಗಿ ಜಿಟಿ ಜಿಟಿ ಮಳೆಗೆ ಹದಗೆಟ್ಟಿದೆ. ಸ್ವಲ್ಪ ಎಚ್ಚರ ತಪ್ಪಿದರೂ ವಾಹನ ಸವಾರರು ಅಪಘಾತಕ್ಕೀಡಾಗುವ ಸಾಧ್ಯತೆ ಹೆಚ್ಚಿದೆ. ಚರಂಡಿ, ಕುಡಿಯುವ ನೀರಿನ ಪೈಪ್ ಸಮಸ್ಯೆ ಇದ್ದರೆ ಅಧಿಕಾರಿಗಳು ಅಥವಾ ಮನೆ ಮಾಲೀಕರು ಮೊದಲೇ ಮಹಾನಗರ ಪಾಲಿಕೆ ಗಮನಕ್ಕೆ ತರಬಹುದಿತ್ತು. ಅಥವಾ ಅಧಿಕಾರಿಗಳೇ ಆ ಕುರಿತು ಗಮನಿಸಿ ಮೊದಲು ಸಮಸ್ಯೆ ಬಗೆಹರಿಸಿ ಬಳಿಕ ಡಾಂಬರು ಹಾಕಬೇಕಿತ್ತು

> ಪೂರ್ವ ನಿರ್ಧರಿತ ಯೋಜನೆಯಂತೆ ರಸ್ತೆಗೆ ಡಾಂಬರು ಹಾಕಲಾಗುತ್ತದೆ. ಆದರೆ ಮನೆ ಮಾಲೀಕರು ಚರಂಡಿ, ಕುಡಿಯುವ ನೀರಿನ ಪೈಪ್ ಸಮಸ್ಯೆಯಾಗಿದೆ ಎಂದು ಹೇಳುತ್ತಾರೆ. ಅದನ್ನು ನಾವು ಪರಿಗಣಿಸಲೇಬೇಕಾಗುತ್ತದೆ. ಮುಂದೆ ಹೀಗಾಗದಂತೆ ಎಚ್ಚರ ವಹಿಸಲಾಗುವುದು.
>
> **- ಸತ್ಯನಾರಾಯಣ, ಪಾಲಿಕೆ ಎಂಜಿನಿಯರ್**

ಎಂಬ ಅಭಿಪ್ರಾಯ ವ್ಯಕ್ತವಾಗಿದೆ.

ಮತ್ತೊಂದೆಡೆ ಕೆ.ಆರ್.ಪುರಂನ ಪಂಚಮುಖಿ ಗಣಪತಿ ದೇವಸ್ಥಾನ ಮುಂಭಾಗದ ರಸ್ತೆಯನ್ನು ಸಂಪೂರ್ಣ ಅಗೆಯಲಾಗಿದೆ. ರಸ್ತೆಯ ಆರಂಭದಿಂದ ಅಂತ್ಯದ ವರೆಗೆ ಸುಮಾರು 500 ಮೀಟರ್ ಅಗೆದಿರುವ ಹಿನ್ನಲೆ ಆ ರಸ್ತೆಯಲ್ಲಿ ವಾಹನಗಳು ಸಂಚರಿಸುತ್ತಿಲ್ಲ. ಬಹಳ ವರ್ಷಗಳ ಬಳಿಕ ಡಾಂಬರು ಹಾಕಿರುವ ರಸ್ತೆ ಅಗೆಯಲಾಗಿದೆ. ಮತ್ತೆ ಆ ರಸ್ತೆ ಡಾಂಬರು ಕಾಣುವುದು ಯಾವಾಗ ಎಂಬ ಪ್ರಶ್ನೆ ಸಾರ್ವಜನಿಕರನ್ನು ಕಾಡುತ್ತಿದೆ.

ಅಧಿಕಾರಿಗಳು ಹೀಗೆ ಬೇಕಾಬಿಟ್ಟಿ ಕೆಲಸ ಮಾಡುವುದು ಬಿಟ್ಟು ಬೇರೆ ಕೆಲಸಗಳತ್ತ ಗಮನ ಹರಿಸಬೇಕು. ವಿದ್ಯಾನಗರದ ಮುಖ್ಯ ರಸ್ತೆಯ ಸಿಮೆಂಟ್ ರಸ್ತೆಯಲ್ಲಿ ಆಳೆತ್ತರ ಗುಂಡಿ ಬಿದ್ದಿದ್ದರೂ ಅದನ್ನು ಮುಚ್ಚುವ ಕಾರ್ಯ ಕೈಗೊಂಡಿಲ್ಲ. ಅಧಿಕಾರಿಗಳು ಪರಿಹರಿಸಬೇಕಾದ ಸಮಸ್ಯೆಗಳತ್ತ ಆದ್ಯತೆ ನೀಡಬೇಕೆಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

# ಮಕ್ಕಳನ್ನು ಸಂಸ್ಕಾರವಂತರನ್ನಾಗಿಸಲು ಸಲಹೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಮಕ್ಕಳಿಗೆ ಕೇವಲ ಅಕ್ಷರ ಜ್ಞಾನ ನೀಡುವುದು ಮಾತ್ರ ಶಿಕ್ಷಣವಲ್ಲ, ಉತ್ತಮ ಸಂಸ್ಕಾರ, ಸದ್ಬುದ್ಧಿ ಮತ್ತು ಮಾನವೀಯ ಮೌಲ್ಯ ಕಲಿಸುವ ಜವಾಬ್ದಾರಿ ಶಿಕ್ಷಕ ಮತ್ತು ಪೋಷಕರದ್ದಾಗಿದೆ ಎಂದು ಆದಿಚುಂಚನಗಿರಿ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ ಸಲಹೆ ನೀಡಿದರು.

ನಗರದ ಬಿ.ಕಾಟೀಹಳ್ಳಿಯಲ್ಲಿರುವ ಕುವೆಂಪು ಶಾಲೆಯಲ್ಲಿ ಸೋಮವಾರ ನಡೆದ ಅಕ್ಷರಾಭ್ಯಾಸ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಜೀವನದ ಆರಂಭದಲ್ಲೇ ದೊರೆಯುವ ಶಿಕ್ಷಣ ಮತ್ತು ಸಂಸ್ಕಾರವೇ ವ್ಯಕ್ತಿತ್ವದ ಭದ್ರ ಅಡಿಪಾಯವಾಗುತ್ತದೆ. ಹೃದಯಕ್ಕೆ ಬಿದ್ದ ಅಕ್ಷರ ಮತ್ತು ಭೂಮಿಗೆ ಬಿದ್ದ ಬೀಜ ಎಂದಿಗೂ ನಾಶವಾಗುವುದಿಲ್ಲ. ಅವು ಕಾಲಕ್ರಮೇಣ ಬೆಳೆಯುತ್ತಾ ಸಮಾಜಕ್ಕೆ ಉತ್ತಮ ಫಲ ನೀಡುತ್ತವೆ. ಆದ್ದರಿಂದ ಮಕ್ಕಳಲ್ಲಿ ಬಾಲ್ಯದಿಂದಲೇ ವಿದ್ಯೆ, ಸಂಸ್ಕಾರ ಮತ್ತು ಮೌಲ್ಯಗಳನ್ನು ಬಿತ್ತಬೇಕೆಂದರು.

ಮನೆಯೇ ಮೊದಲ ಪಾಠ ಶಾಲೆ ಮತ್ತು ತಾಯಿಯೇ ಮೊದಲ ಗುರು ಆಗಿರುತ್ತಾರೆ. ಮಕ್ಕಳ ವ್ಯಕ್ತಿತ್ವ ನಿರ್ಮಾಣದಲ್ಲಿ ತಂದೆ-ತಾಯಿ ಪಾತ್ರ ಮಹತ್ವದ್ದಾಗಿದೆ. ಮಕ್ಕಳಿಗೆ ಜ್ಞಾನ, ವಿದ್ಯೆ, ವಿವೇಕ ಮತ್ತು ನೈತಿಕ ಮೌಲ್ಯಗಳನ್ನು ಕಲಿಸುವ ಜವಾಬ್ದಾರಿ ಕುಟುಂಬದ ಮೇಲಿದೆ. ಶಿಕ್ಷಣದ ಜೊತೆಗೆ ಧಾರ್ಮಿಕ, ಆಧ್ಯಾತ್ಮಿಕ ಹಾಗು ಸಾಂಸ್ಕೃತಿಕ ಮೌಲ್ಯಗಳನ್ನು ಪರಿಚಯಿಸುವ ಮೂಲಕ ಉತ್ತಮ ಸಮಾಜ ನಿರ್ಮಾಣ ಸಾಧ್ಯವಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಅಧ್ಯಕ್ಷತೆ ವಹಿಸಿದ್ದ ಸಂಸ್ಥೆಯ ಕಾರ್ಯದರ್ಶಿ ಬಿ.ಈ. ಶಿವರಾಮೇಗೌಡ ಮಾತನಾಡಿ, ಮಕ್ಕಳ ಉತ್ತಮ ಭವಿಷ್ಯ ರೂಪಿಸಲು ಪೋಷಕರು, ಶಿಕ್ಷಕರು ಹಾಗೂ ಶಿಕ್ಷಣ ಸಂಸ್ಥೆಗಳು ಸಮನ್ವಯದಿಂದ ಕಾರ್ಯನಿರ್ವಹಿಸಬೇಕೆಂದರು.


ಶಾಲೆಯ ಆಡಳಿತ ಮಂಡಳಿ ನಿರ್ದೇಶಕಿ ಚಂದನ ಹೇಮಂತ್, ಮುಖ್ಯಶಿಕ್ಷಕಿ ಹೆಚ್.ಬಿ.ವಿನುತ, ಎನ್.ದೀಪಾ, ಟಿ.ಎ.ಸವಿತಾ, ಡಿ.ಜೆ.ನವೀನ್ ಕುಮಾರ್ ಮೊದಲಾದವರಿದ್ದರು.

# ರಾಷ್ಟ್ರೀಯ ಹೆದ್ದಾರಿ ಭೂಕುಸಿತ ತಡೆಗೆ ಸಾಯಿಲ್ ನೈಲಿಂಗ್

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಮಳೆಗಾಲ ಬಂದಾಗಲೆಲ್ಲ ಭೂಕುಸಿತದಿಂದ ಸಂಚಾರಕ್ಕೆ ತೀವ್ರ ತೊಂದರೆ ಉಂಟಾಗುತ್ತಿದ್ದ ಬೆಂಗಳೂರು-ಮಂಗಳೂರು ರಾಷ್ಟ್ರೀಯ ಹೆದ್ದಾರಿ 75ರ ಶಿರಾಡಿ ಘಾಟ್‌ನಲ್ಲಿ ಭೂಕುಸಿತಕ್ಕೆ ಶಾಶ್ವತ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (ಎನ್ ಹೆಚ್‌ಎಐ) ಟಿಸಾಯಿಲ್ ನೈಲಿಂಗ್‌ಟಿ ಹಾಗೂ ಟಿಹೈಡ್ರೋ ಮಲ್ಚಿಂಗ್‌ಟಿ ತಂತ್ರಜ್ಞಾನ ಬಳಸಿ ಕಾಮಗಾರಿ ಆರಂಭಿಸಿದೆ.

ಸಕಲೇಶಪುರದಿಂದ ದಕ್ಷಿಣ ಕನ್ನಡ ಜಿಲ್ಲೆಯ ಗುಂಡ್ಯವರೆಗೆ ವ್ಯಾಪಿಸಿರುವ ಶಿರಾಡಿ ಘಾಟ್‌ನಲ್ಲಿ ಕಳೆದ ಹಲವು ವರ್ಷಗಳಿಂದ ಮಳೆಗಾಲದಲ್ಲಿ ಭೂಕುಸಿತ ಮರುಕಳಿಸುತ್ತಿದ್ದು, ವಾಹನ ಸಂಚಾರ ಪದೇ ಪದೇ ಸ್ಥಗಿತಗೊಳ್ಳುತ್ತಿತ್ತು. ಈ ಹಿನ್ನೆಲೆಯಲ್ಲಿ ಅಪಾಯದ ಪ್ರದೇಶಗಳಲ್ಲಿ ಸುಮಾರು 40 ಕೋಟಿ ರೂ. ವೆಚ್ಚದಲ್ಲಿ ವೈಜ್ಞಾನಿಕ ಕಾಮಗಾರಿ ಕೈಗೊಳ್ಳಲಾಗಿದೆ.



ಭೂಕುಸಿತ ಸಂಭವಿಸುವ ಸಾಧ್ಯತೆ ಇರುವ ಗುಡ್ಡಗಳ ಇಳಿಜಾರು ಪ್ರದೇಶಗಳಲ್ಲಿ ಸುಮಾರು 12 ಮೀಟರ್ (36 ಅಡಿ) ಆಳದ ರಂಧ್ರಗಳನ್ನು ಕೊರೆಯಲಾಗುತ್ತದೆ. ಎರಡು ಅಡಿ ಅಂತರದಲ್ಲಿ ರಂಧ್ರಗಳನ್ನು ನಿರ್ಮಿಸಿ ಸುಮಾರು 37 ಅಡಿ ಉದ್ದದ ಕಬ್ಬಿಣದ ಸರಳುಗಳನ್ನು ಅಳವಡಿಸಲಾಗುತ್ತದೆ. ಬಳಿಕ ಅವುಗಳನ್ನು ಸಿಮೆಂಟ್‌ನಿಂದ ಭದ್ರಪಡಿಸಿ ಕಬ್ಬಿಣದ ಜಾಲರಿ ಅಳವಡಿಸಲಾಗುತ್ತದೆ. ಅದರ ಮೇಲೆ ಟಿಹೈಡ್ರೋ ಮಲ್ಚಿಂಗ್‌ಟಿ ತಂತ್ರಜ್ಞಾನದ ಮೂಲಕ ಹುಲ್ಲಿನ ಬೀಜಗಳನ್ನು ಬಿತ್ತನೆ ಮಾಡಿ, ಗುಡ್ಡದ ಮೇಲ್ಮೈಯಲ್ಲಿ ಹುಲ್ಲು ಬೆಳೆಯುವಂತೆ ಮಾಡಲಾಗುತ್ತದೆ. ಅದರಿಂದ ಮಣ್ಣಿನ ಸವೆತ ಕಡಿಮೆಯಾಗಿ ಭೂಕುಸಿತ ತಡೆಯಲು ನೆರವಾಗಲಿದೆ.

### ಭೂಕುಸಿತಕ್ಕೆ ಕಾರಣವೇನು

ಸಕಲೇಶಪುರ-ಮಾರನಹಳ್ಳಿ ಚತುಷ್ಪಥ ರಸ್ತೆ ನಿರ್ಮಾಣದ ವೇಳೆ ಗುಡ್ಡಗಳನ್ನು ವ್ಯಾಪಕವಾಗಿ ಕತ್ತರಿಸಿರುವುದು ಹಾಗೂ ಪಶ್ಚಿಮಘಟ್ಟ ಪ್ರದೇಶದ ಮೆದುವಾದ ಮಣ್ಣಿನ ಸ್ವಭಾವದಿಂದ ಮಳೆಗಾಲದಲ್ಲಿ ಮಣ್ಣು ಸಡಿಲಗೊಂಡು ಭೂಕುಸಿತ ಸಂಭವಿಸುತ್ತಿದೆ. ಅದನ್ನು ನಿಯಂತ್ರಿಸಲು ಈ ಹೊಸ ತಾಂತ್ರಿಕ ವಿಧಾನ ಅಳವಡಿಸಲಾಗಿದೆ.

### ಹತ್ತಕ್ಕೂ ಹೆಚ್ಚು ಕಡೆ ಕಾಮಗಾರಿ

ಕಪ್ಪಳ್ಳಿ, ದೊಡ್ಡತಪ್ಲು, ಹೆಗ್ಗದ್ದೆ ಸೇರಿ ಸಕಲೇಶಪುರ-ಮಾರನಹಳ್ಳಿ ನಡುವಿನ ಹತ್ತಕ್ಕೂ ಹೆಚ್ಚು ಭೂಕುಸಿತ ಪ್ರದೇಶಗಳಲ್ಲಿ ಕಾಮಗಾರಿ ನಡೆಯುತ್ತಿದೆ. ಈ ಯೋಜನೆ ಯಶಸ್ವಿಯಾದರೆ ಶಿರಾಡಿಘಾಟ್‌ನಲ್ಲಿ ಮಳೆಗಾಲದ ಭೂಕುಸಿತದ ಆತಂಕ ಗಣನೀಯವಾಗಿ ಕಡಿಮೆಯಾಗುವ ನಿರೀಕ್ಷೆಯಿದೆ.

ಶಿರಾಡಿಘಾಟ್ ಮಾರ್ಗವು ದಕ್ಷಿಣ ಕನ್ನಡ, ಧರ್ಮಸ್ಥಳ, ಕುಕ್ಕೆ ಸುಬ್ರಹ್ಮಣ್ಯ ಸೇರಿ ಕರಾವಳಿ ಭಾಗದ ಪ್ರಮುಖ ಧಾರ್ಮಿಕ ಹಾಗೂ ಪ್ರವಾಸಿ ತಾಣಗಳಿಗೆ ಸಂಪರ್ಕ ಕಲ್ಪಿಸುವ ಪ್ರಮುಖ ರಾಷ್ಟ್ರೀಯ ಹೆದ್ದಾರಿಯಾಗಿದ್ದು, ಈ ಕಾಮಗಾರಿಯಿಂದ ಸಾವಿರಾರು ವಾಹನ ಸವಾರರಿಗೆ ಸುರಕ್ಷಿತ ಹಾಗು ನಿರಾಳ ಸಂಚಾರ ಸಾಧ್ಯವಾಗಲಿದೆಯೆಂಬ ವಿಶ್ವಾಸ ವ್ಯಕ್ತವಾಗಿದೆ.

ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ದಶಕಗಳಿಂದ ಕುಂಟುತ್ತಾ ಸಾಗುತ್ತಿದೆ ಎಂಬ ಆರೋಪಗಳು ಕೇಳುತ್ತಲೇ ಇವೆ. ಗುತ್ತಿಗೆದಾರರ ನಿರ್ಲಕ್ಷ್ಯ ಹಾಗೂ ಮಳೆ ಹಿನ್ನೆಲೆಯಲ್ಲಿ ಕೆಲಸಕ್ಕೆ ವೇಗ ಸಿಕ್ಕಿರಲಿಲ್ಲ. ಆದರೆ ಕಳೆದ ಎರಡ್ಮೂರು ವರ್ಷಗಳಿಂದ ಕಾಮಗಾರಿಗೂ ವೇಗ ದೊರೆತಿದ್ದು ಶೀಘ್ರದಲ್ಲೇ ಕಾಮಗಾರಿ ಸಂಪೂರ್ಣ ಮುಗಿಯುವ ಭರವಸೆ ಸಿಕ್ಕಿದೆ.

ರಾಜಧಾನಿ ಬೆಂಗಳೂರಿನಿಂದ ಬಂದರು ನಾಡು ಮಂಗಳೂರಿಗೆ ಸಂಪರ್ಕಿಸುವ ಪ್ರಮುಖ ರಸ್ತೆ ಇದಾಗಿದೆ. ನಿತ್ಯ ಸಾವಿರಾರು ವಾಹನಗಳು ಸಂಚರಿಸುವುದರಿಂದ ಸ್ಥಳೀಯವಾಗಿ ವ್ಯಾಪಾರ ವಹಿವಾಟಿಗೂ ಈ ರಸ್ತೆ ಆಧಾರವಾಗಿದೆ. ಆದರೆ ಮಳೆಗಾಲ ಬಂತೆಂದರೆ ಸಮಸ್ಯೆಗಳ ಸರಮಾಲೆಯೇ ಶುರುವಾಗುತ್ತದೆ. ಭೂಕುಸಿತದಿಂದ ಅನೇಕ ತೊಂದರೆಗಳು ಎದುರಾಗುತ್ತಲೇ ಇವೆ. ಈ ಎಲ್ಲಾ ಸಮಸ್ಯೆಗಳನ್ನು ಗಂಭೀರವಾಗಿ ಪರಿಗಣಿಸಿದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ನೂತನ ಕ್ರಮಕ್ಕೆ ಮುಂದಾಗಿದ್ದು ಹೊಸ ಆಶಾಭಾವ ಮೂಡಿಸಿದೆ.

## ನೂತನ ಕಾರ್ಯಪಡೆಯಿಂದ ಶಿಕ್ಷಣ ವ್ಯವಸ್ಥೆ ಅಧಪತನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ದೇಶಾದ್ಯಂತ ಪರೀಕ್ಷಾ ವ್ಯವಸ್ಥೆ ಸುಧಾರಣೆ ಹೆಸರಿನಲ್ಲಿ ಉದ್ಯಮಿ ನಂದನ್ ನಿಲೇಕಣಿ ನೇತೃತ್ವದಲ್ಲಿ ಕಾರ್ಯಪಡೆ ರಚಿಸಿರುವ ಕೇಂದ್ರ ಸರ್ಕಾರ ಶಿಕ್ಷಣ ವ್ಯವಸ್ಥೆಯನ್ನು ಮತ್ತಷ್ಟು ಅಧಪನತಕ್ಕೆ ಕೊಂಡೊಯ್ಯಲು ಪ್ರಯತ್ನಿಸುತ್ತಿದೆ ಎಂದು ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟುಡೆಂಟ್ ಸಂಘಟನೆ (ಎಐಡಿಎಸ್‌ಒ) ಆರೋಪಿಸಿದೆ. ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರ ರಾಜೀನಾಮೆಯ ಮಾರನೇ ದಿನವೇ ಕೇಂದ್ರ ಪ್ರಧಾನಿ ನರೇಂದ್ರ ಮೋದಿ ಸುಧಾರಣೆಯ ಹೆಸರಿನಲ್ಲಿ ಮತ್ತೊಂದು ಹೊಸ ತಂತ್ರವನ್ನು ಹೆಣೆದಿದ್ದಾರೆ. ಈ ಮೂಲಕ ಕೇಂದ್ರ ಸರ್ಕಾರವು ವಿದ್ಯಾರ್ಥಿ ಸಮುದಾಯಕ್ಕೆ ಮತ್ತೆ ದ್ರೋಹ ಬಗೆದಿದೆ. ಇಂತಹ ಸಂದರ್ಭದಲ್ಲಿ ಯಾವುದೋ ಒಂದು ಸುಧಾರಣಾ ಸಮಿತಿಯನ್ನು ನೇಮಿಸುವುದು ಅಥವಾ ಸಣ್ಣಪುಟ್ಟ ಆಡಳಿತಾತ್ಮಕ ಬದಲಾವಣೆ ಮಾಡುವುದು ಪರಿಹಾರವಲ್ಲ ಎಂದು ಎಐಡಿಎಸ್‌ಒ ಅಭಿಪ್ರಾಯಪಟ್ಟಿದೆ.

## ಇತಿಹಾಸದಲ್ಲಿ ಈ ದಿನ

### ಜುಲೈ-29

1836: ಫ್ರಾನ್ಸ್‌ನ ಪ್ಯಾರಿಸ್‌ನಲ್ಲಿರುವ ಪ್ರಸಿದ್ಧ ಆರ್ಕ್ ಡಿ ಟ್ರಯಂಫ್ ಸ್ಮಾರಕ ಉದ್ಘಾಟನೆಯಾಯಿತು.

1948: ಎರಡನೇ ಮಹಾಯುದ್ಧದ ಬಳಿಕ 12 ವರ್ಷಗಳ ವಿರಾಮದ ನಂತರ ಲಂಡನ್‌ನಲ್ಲಿ 14ನೇ ಒಲಿಂಪಿಕ್ಸ್ ಕ್ರೀಡಾಕೂಟ ಆರಂಭವಾಯಿತು.

1957: ಅಂತರರಾಷ್ಟ್ರೀಯ ಅಣುಶಕ್ತಿ ಸಂಸ್ಥೆ ಸ್ಥಾಪನೆಯಾಯಿತು.

1958: ಅಮೆರಿಕದ ಅಧ್ಯಕ್ಷ ಡ್ವೈಟ್ ಐಸೆನ್‌ಹೋವರ್ ಅವರು ನಾಸಾ ಸ್ಥಾಪನೆಗೆ ಕಾರಣವಾದ ಕಾನೂನಿಗೆ ಸಹಿ ಹಾಕಿದರು.

1981: ಬ್ರಿಟನ್‌ನ ರಾಜಕುಮಾರ ಚಾರ್ಲ್ಸ್ ಮತ್ತು ಲೇಡಿ ಡಯಾನಾ ಸ್ಪೆನ್ಸರ್ ಅವರ ವಿವಾಹ ಲಂಡನ್‌ನಲ್ಲಿ ನಡೆಯಿತು.

2005: ಖಗೋಳಶಾಸ್ತ್ರಜ್ಞರು ಎರಿಸ್ ಎಂಬ ಕುಬ್ಜ ಗ್ರಹದ ಆವಿಷ್ಕಾರವನ್ನು ಘೋಷಿಸಿದರು.

**ಜನನ**

1883: ಇಟಲಿಯ ಸರ್ವಾಧಿಕಾರಿ ಬೆನಿಟೊ ಮುಸ್ಸೋಲಿನಿ

1905: ವಿಶ್ವಸಂಸ್ಥೆಯ ಮಾಜಿ ಪ್ರಧಾನ ಕಾರ್ಯದರ್ಶಿ ಡ್ಯಾಗ್ ಹ್ಯಾಮರ್‌ಶೋಲ್ಡ್

1981: ಸ್ಪೇನ್‌ನ ಖ್ಯಾತ ಫಾರ್ಮುಲಾ ಒನ್ ಚಾಲಕ ಫೆರ್ನಾಂಡೊ ಅಲೋನ್ಸೊ

**ಮರಣ**

1890: ವಿಶ್ವಪ್ರಸಿದ್ಧ ಚಿತ್ರಕಾರ ವಿನ್ಸೆಂಟ್ ವ್ಯಾನ್ ಗಾಗ್

1994: ನೊಬೆಲ್ ಪ್ರಶಸ್ತಿ ಪುರಸ್ಕೃತ ವಿಜ್ಞಾನಿ ಡೊರೊಥಿ ಹಾಡ್ಜಿನ್

# ಲಲಿತಾ-1

**ಗ್ರಾಮಾಯಣ-33**

**- ಧನಂಜಯ ಜೀವಾಳ ಬಿ.ಕೆ.**

ಈ ಕಂತ್ರಿ ನನಮಕ್ಳುನ್ನೆಲ್ಲ ಇಂಜೆಕ್ಷನ್ ಕೊಟ್ ಸಾಯಿಸ್ಬೇಕ್ ಮಾರಾಯ!!! ಎಂದವನೇ, ಹಿಂದೆ ಕುಳಿತಿದ್ದ ಬಾಬುವನ್ನು ಇಳಿಯಲು ಹೇಳಿ, ತಾನೂ ಬೈಕಿನಿಂದ ಇಳಿದು ಸ್ಟ್ಯಾಂಡ್ ಹಾಕಲು ಸಮತಟ್ಟಿನ ನೆಲವನ್ನ ಹುಡುಕಲು ಯತ್ನಿಸುತಿದ್ದ ಶಂಕ್ರ ಸರಿಯಾದ ನೆಲ ಸಿಗದೇ ಮತ್ತಷ್ಟೂ ವ್ಯಗ್ರನಾಗುತಿದ್ದ.

ಚರಂಡಿಗೆ ನಾಮಕಾವಸ್ಥೆಗೆ ಮುಚ್ಚಿದ್ದ ಆ ತಡಕಲು ಸಿಮೆಂಟು ಸ್ಲ್ಯಾಬುಗಳು ಸಣ್ಣಮಕ್ಕಳು ಸಹಾ ಒಮ್ಮೆ ನಿಂತಲ್ಲಿಂದ ನೆಗೆದು ಸ್ಲ್ಯಾಬಿನ ಮೇಲೆ ಕುಪ್ಪಳಿಸಿ ನಿಂತರೂ ಸಾಕು ಹಳೆಯ ಅಲ್ಯೂಮಿನಿಯಂ ಪ್ಲೇಟು ಮುರಿದುಕೊಳ್ಳುವಂತೆ ಬುಸುಕ್ಕೆಂದು ಮುರಿದು ಬಗಾಲಾಗುತಿದ್ದವು. ಹಾಗೆ ಮುರಿದು ಚರಂಡಿಯೊಳಗೇ ಕ್ರಾಸುಕ್ರಾಸಾಗಿ ಸಿಕ್ಹಾಕಿಕೊಂಡು, ಮೇಲಿನಿಂದ ಹರಿದು ಬರುತಿದ್ದ ಗೊಚ್ಚೆ-ಉಚ್ಚೆಗಳೆಲ್ಲ ಅಲ್ಲೇ ನಿಂತು ಅಸಹ್ಯದ ಪರಮಾವಧಿಯ ಉತ್ತುಂಗದಲ್ಲಿದ್ದ ಆ ಪವಿತ್ರ ಜಲೋಧಕದಲ್ಲಿ ಮಾನ್ಯ ಮುತ್ತಣ್ಣನವರು ತಲೆಯಡಿಯಾಗಿ ಬಿದ್ದು, ಸೊಂಟದವರೆಗೂ ಕಣ್ಮರೆಯಾಗಿದ್ದರು. ಏಳಲು ಪ್ರಯತ್ನಿಸಲು ಬಳಸಿದ್ದ ಬಲಗೈ ಹಾಗೂ ಹಸುರು ಬಣ್ಣದ ಚಡ್ಡಿ ಮತ್ತದರ ನಂತರದ ಕಡ್ಡಿ ಕಾಲುಗಳೇ ಮಾನ್ಯ ಮುತ್ತಣ್ಣನವರ ಅಸ್ತಿತ್ವಕ್ಕೆ ಇದ್ದ ಪುರಾವೆ.

ವಾರದ ಹಿಂದಷ್ಟೇ ವ್ಯಸನಮುಕ್ತಿ ಕೇಂದ್ರದಲ್ಲಿ ಕೋರ್ಸೊಂದನ್ನು ಯಶಸ್ವಿಯಾಗಿ ಮುಗಿಸಿಕೊಂಡು ಮನೆಗೆ ಗ್ರ್ಯಾಂಡ್ ಎಂಟ್ರಿ ಕೊಟ್ಟಿದ್ದ ಮುತ್ತಣ್ಣ ನಿನ್ನೆಯಷ್ಟೇ ಹಿಂಗೇ; ಈಗ ಬಂದೆ ಎಂದು ಬಿಎಂ ರಸ್ತೆಯ ಮಮತಾ ಬಾರಿನ ಕಡೆ ಪಾದಂಗೈದಿದ್ದರು. ರಾತ್ರಿ ಹತ್ತಾದರೂ ಮನೆಗೆ ಬಾರದಿದ್ದಾಗ, ಹೆಂಡತಿ ಲಲಿತ ತನ್ನ ತಮ್ಮನಿಗೆ ಹೇಳಿ ಕಳಿಸಿ ಅಂತೂ ಇಂತೂ ಮುತ್ತಣ್ಣನ ಕರೆಂಟ್ ಲೊಕೇಷನ್ನನ್ನು ಹುಡುಕಿಸಿದ್ದಳು.

ಶಂಕ್ರ ಮತ್ತವನ ಗೆಳೆಯ ಬಾಬು ಇಬ್ಬರೂ ಸೇರಿ ಅಕ್ಕಪಕ್ಕದ ಸ್ಲ್ಯಾಬುಗಳನ್ನು ಸಡಿಲಗೊಳಿಸಿ, ಆ ಹಸಿರು ಚಡ್ಡಿಯ ಮೇಲ್ಭಾಗದ ದೇಹವನ್ನು ಹೊರಗೆಳೆಯಲು ಯತ್ನಿಸುತಿದ್ದಾಗ, ಶಂಕ್ರನ ಬಾರಕ್ಕೆ ಬಲಬಾಗದ ಸ್ಲ್ಯಾಬು ಹಂಗೇ ನಿಧಾನವಾಗಿ ಸ್ಲೋಮೋಷನ್ನಲ್ಲಿ ಮುರಿಯುತ್ತಾ ಚರಂಡಿಯೊಳಕ್ಕೇ ಇಳಿಯಿತು. ಬಾಬು ಹಿಡಿದೆತ್ತಿದ್ದ ಆ ಸ್ಲ್ಯಾಬು ಪುಣ್ಯಕ್ಕೆ ಕಟ್ಟಾಗದೇ ಹಾಗೇ ಪಕ್ಕದ ಮೋರಿಯ ಗೋಡೆಗೆ ಒರಗಿಸಲ್ಪಟ್ಟಿತು. ಅಲ್ಲೇ ನಡೆದು ಹೋಗುತಿದ್ದ ವೃದ್ಧರೊಬ್ಬರು ನಿಂತು ನನ್ನ ಸಹಾಯ ಏನಾದ್ರೂ ಬೇಕಾ? ಎಂದು ಕೇಳಿದರು. ಸಿಟ್ಟಿನಿಂದ ದುಸದುಸ ಎನ್ನುತಿದ್ದ ಶಂಕ್ರ ಇರಿ, ಯಜ್ಮಾನ್ರೇ, ಇವ್ನುನ್ನ ನಾವಿಬ್ರೂ ಸೇರಿ ಎತ್ತಕ್ಕಾಗ್ದೇ ಇದ್ರೆ ಸಹಾಯ ಮಾಡ್ರಂತೆ. ಇವನ್ಕಥೆ ಕೇಳಿದ್ರೆ, ಈತನ್ನ ಎತ್ತದೇ ಬೇಡ ಅಂತೀರಿ ನೀವು. ಮುತ್ತೂ, ಮುತ್ತೂ, ಮುತ್ತೂ ಬಾವಾ, ಯದ್ದೇಳಾ ಮಾರಾಯಾ. ನಿನ್ ಬಾಯಿಗ್ ಮಣ್ಣಾಕಾ ಎಂದು ಹಂಗೂ ಹಿಂಗೂ ಮಾಡಿ ಮಾನ್ಯ ಮುತ್ತಣ್ಣನವರ ಉಸಿರಾಡುತಿದ್ದ ಶರೀರವನ್ನು ಮೋರಿಗೊರಗಿಸಿ ಕೂರಿಸಿದರು.

ಅಲ್ಲೇ ಹೋಗುತಿದ್ದ ಆಟೋ ಒಂದನ್ನು ಶೀಟಿ ಹೊಡೆದು ಕರೆದ ಬಾಬು, ಈ ಮುಂಡೇಗಂಡನ್ನ ಆಟೋರಿಕ್ಷಾದ ಒಳಗೆ ತುರುಕುವುದು ಹೇಗೆ ಎಂದು ಪ್ಲಾನ್ ಅಂಡ್ ಎಸ್ಟಿಮೇಟು ಮಾಡತೊಡಗಿದ. ಆರಡಿಗೂ ಮೀರಿದ ಪ್ರಜ್ಞೆ ತಪ್ಪಿದ ಈ ದೇಹವನ್ನ ಒಂದೂವರೆಯಡಿ ಅಗಲ, ಮೂರಡಿ ಎತ್ತರ ಪ್ರವೇಶವಿರುವ ರಿಕ್ಷಾದೊಳಗೆ ನುಗ್ಗಿಸಿ ಕೂರಿಸುವುದು ಹೇಗೆಂದು ಯೋಚಿಸುತಿದ್ದಾಗ, ಆ ವೃದ್ಧರು ತಾವೇ ರಿಕ್ಷಾದೊಳಗೆ ನುಸುಳಿ, ನೀವಿಬ್ರೂ ಎತ್ತಿಕೊಡಿ, ನಾ ಒಳಕ್ಕೆ ಎಳೆದುಕೊಳ್ತೀನಿ ಎಂದು ಹುರಿದುಂಬಿಸಿದರು. ಎತ್ತಲಾರದೇ ಎತ್ತಿ ಮುಲುಕಾಡುತ್ತಾ, ಆ ಉದ್ದುದ್ದ ಕಾಲುಗಳನ್ನು ಮುರಿದುಹೋದರೆ ಹೋಗಲಿ ಎಂದು ದಬ್ಬಾಯ್ಸಿ ಮರದ ದಿಮ್ಮಿಯನ್ನು ನೂಕುವಂತೆ ನೂಕಿ, ಪೂರ್ತಿ ನೂಕಲೂ ಆಗದೇ ಬೈಕಿನ ಕ್ಯಾರಿಯರ್ರಿಗೆ ಕಟ್ಟಿದ್ದ ಹಳದಿ ಪ್ಲಾಸ್ಟಿಕ್ ವೈರಿಂದ ಕಾಲುಗಳು ಹಾಗೂ ಆಟೋದ ಕಂಬಿಗಳನ್ನು ಸೇರಿಸಿ ಬಿಗಿದರು. ಆಟೋದ ಒಳಗಡೆ ಸಹಾಯ ಮಾಡಲು ಸೇರಿಕೊಂಡಿದ್ದ ಯಜ್ಮಾನರು ಹೊರಬರಲು ಆಗದಂತೆ ರಿಕ್ಷಾದ ಆಚೆ ಬದಿಗೆ ಕಬ್ಬಿಣದ ಕಂಬಿಗಳನ್ನು ತಾಕುಶೀಕಾಗಿ ವೆಲ್ಡಿಂಗ್ ಮಾಡಲಾಗಿತ್ತು. ಓಹೋಹೋ, ನಾನೆಂಗೆ ದಾಟ್ಕಳದು ಈಗ? ನಾನು ಸಿಕ್ಹಾಕ್ಕೊಂಡ್ನಲ್ಲ! ಏ ಯಪ್ಪಾ, ಎಂತ ಮಾಡದು ಈಗ?ಟಿ ಎಂದು ಆತಂಕದಿಂದ ಕೇಳಿದರು.



ಬೈಕಿನ ಹಿಂಭಾಗದ ಸೀಟಿನಲ್ಲಿ ಕುಳಿತಿದ್ದ ಬಾಬು ಹಾಗೆಯೇ ರಿಕ್ಷಾದೆಡೆಗೆ ಬಾಗಿ ಓ! ಯಂತ ಮಾಡದು ಈಗ, ಮುತ್ತಣ್ಣನ ಮನೆ ಇಲ್ಲೇ ಪಕ್ಕದ ಬೀದಿಯಲ್ಲಿದೆ, ಸ್ವಲ್ಪ ಅಡ್ಜಸ್ಟ್ ಮಾಡ್ಕಳಿ, ಶಂಕ್ರನೇ ಬೈಕಲ್ಲಿ ನಿಮ್ಮನ್ನ ನಿಮ್ಮನೇಗೇ ಬಿಡ್ತಾನೆ, ಪ್ಲೀಸ್ ಎಂದು ಗೋಗರೆದ.

ರಸ್ತೆ ಗುಂಡಿಗಳನ್ನು ತಪ್ಪಿಸುತ್ತಾ, ಗೊತ್ತುಗುರಿಯಿಲ್ಲದೇ ಹಾಕಿದ್ದ ಹಂಪುಗಳನ್ನು ಹಾರಿಸುತ್ತಾ, ಮನಸ್ಸಿಗೆ ಬಂದಂತೆ ನುಸುಳುವ ಬೈಕ್ ಸವಾರರಿಂದ ತಪ್ಪಿಸಿಕೊಳ್ಳುತ್ತಾ ಹದಿನೈದು ನಿಮಿಷ ಸಾಗಿದ ರಿಕ್ಷಾ ಒಂದು ಸಾಧಾರಣ ಸಜ್ಜಿತ ಹೆಂಚಿನ ಮನೆಯ ಮುಂದೆ ನಿಂತಿತು.

ಮನೆಯೊಳಗಿಂದ ಕಣ್ಣೀರು ಒರೆಸಿಕೊಳ್ಳುತ್ತಲೇ ಬಂದ ಲಲಿತ ಗಂಡನ ಕೈ-ಕಾಲುಗಳನ್ನು ರಿಕ್ಷಾದ ಕಂಬಿಗಳಿಗೆ ಕಟ್ಟಿಹಾಕಿದ್ದನ್ನು ಕಂಡು, ಇಡೀ ಬೀದಿಗೇ ಕೇಳಿಸುವಂತೆ ಗಟ್ಟಿಯಾಗಿ ರೋಧಿಸತೊಡಗಿದಳು. ರಿಕ್ಷಾದ ಒಳಗಿದ್ದ ವೃದ್ಧರು ಏನಾಗಿಲ್ಲ, ಸುಮ್ಮನಿರಮ್ಮಾ, ಬಿದ್ದಿದ್ದಕ್ಕೆ ಒಂದಷ್ಟು ಕಡೆ ಗಾಯವಾಗಿದೆ ಅಷ್ಟೇ. ರಿಕ್ಷಾದ ಚಿಕ್ಕ ಜಾಗದಲ್ಲಿ ಎಚ್ಚರ ತಪ್ಪಿದವರನ್ನು ಕೂರಿಸಲು ಅಥವಾ ಮಲಗಿಸಲು ಆಗದ್ದರಿಂದ, ಬೀಳದಿರಲೆಂದು ಸೇಫ್ಟಿಗೆ ಕಟ್ಟಿದ್ದಾರೆ, ಕಟ್ಟು ಬಿಚ್ಚಲು ಹೇಳು ಎಂದರು. ಎಲ್ಲೋ ಕೇಳಿದ ದನಿಯಂತಿದೆಯಲ್ಲ ಎಂದು ರಿಕ್ಷಾದ ಕತ್ತಲೆಯ ಮೂಲೆಯಲ್ಲಿದ್ದ ಮುಖದೆಡೆಗೆ ಕಣ್ಣನ್ನು ಕಿರಿದಾಗಿಸಿಕೊಂಡು ನೋಡಿದ ಲಲಿತ ಸ್ಸಾರ್! ನೀವಾ!?ಟಿ ಎಂದುದ್ಘರಿಸಿದಳು.

ಬೈಕ್ ನಿಲ್ಲಿಸಿ ಓಡಿ ಬಂದ ಶಂಕ್ರ ಹಾಗೂ ಬಾಬು ಇಬ್ಬರೂ ಕಟ್ಟಿದ್ದ ಹಗ್ಗ ಬಿಚ್ಚಿ, ಆ ಅಜಾನುಬಾಹು ಆದರೆ ನರಪೇತಲ ದೇಹವನ್ನು ಭುಜ ಹಾಗೂ ಕಾಲ ಬಳಿ ಹಿಡಿದುಕೊಂಡರೆ, ಲಲಿತ ಗಂಡನ ಸೊಂಟದ ಬಳಿ ಸಪೋರ್ಟಿಗೆಂಬಂತೆ ತಳದಿಂದ ಕೈಹಾಕಿ ಹಿಡಿದುಕೊಂಡಳು. ರಿಕ್ಷಾದಿಂದ ಕೆಳಗಿಳಿದ ಕೋದಂಡಪಾಣಿ ಮೇಷ್ಟ್ರು ಬಿಡು, ಬಿಡಮ್ಮ ಲಲಿತಾ, ಒಳಗ್ಹೋಗು, ಮಲಗಿಸಲು ಜಾಗ ರೆಡೀ ಮಾಡು, ನಾವು ಕರ್ಕೊಂಡ್ ಬರ್ತೀವಿ, ಹೋಗು, ಹೋಗು ಎಂದು ತಾವೇ ಹಿಡಿದುಕೊಂಡು, ಮುತ್ತಣ್ಣನನ್ನು ಮನೆಯೊಳಗೆ ಕರೆತರಲು ಸಹಾಯ ಮಾಡಿದರು.

ಮನೆಯೊಳಗಿನ ಮುಂದಿನ ಕೊಠಡಿಯಲ್ಲೇ ಎರಡು ಬೆಂಚುಗಳನ್ನು ಕೂಡಿಸಿ ಮಾಡಿದ್ದ ಒಂದು ಮಿನಿ ಮಂಚದ ಮೇಲೆ ಮುತ್ತಣ್ಣನನ್ನು ಮಲಗಿಸಿದ ನಂತರ, ಕೋದಂಡಪಾಣಿಯವರು ಲಲಿತಳನ್ನು ಕರೆದು, ಅವಳ ಗಂಡನನ್ನು ಉಪಚರಿಸಲು ಕೆಲ ಸಲಹೆಗಳನ್ನು ನೀಡಿ, ತಾನಿಲ್ಲೇ ಹೌಸಿಂಗ್ ಬೋರ್ಡ್ ಕಾಲನಿಯಲಿ ವಾಸವಿರುವುದಾಗಿ ಹೇಳಿ, ನಾಳೆ ಮಧ್ಯಾಹ್ನದ ನಂತರ ಬಂದು ಹೋಗುವೆನೆಂದು ತಿಳಿಸಿ, ಶಂಕರನಿಂದ ತಮ್ಮ ಮನೆಗೆ ಡ್ರಾಪ್ ತೆಗೆದುಕೊಂಡರು. (ಮುಂದುವರಿಯುವುದು)

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248